ನಮಗೇ ಓಟು ಹಾಕ್ಬೇಕು ಆಯ್ತಾ?' ಎನ್ನುತ್ತಿದ್ದರು. ಅವರಾದರೂ ಏದುಸಿರು ಬಿಡುತ್ತ 'ಅಲ್ಲಿ ತಂಕ ಬದ್ಕಿದ್ರೆ ಖಂಡಿತ ಹಾಕ್ತೆ ಮಾರಾಯಾ' ಎನ್ನುತ್ತಿದ್ದರು.

ಹೀಗೆ ಧುಮ್ಮಿಕ್ಕಿ ಹರಿಯುತ್ತಿರುವ ಚುನಾವಣಾ ಪ್ರವಾಹದಲ್ಲಿ ತನ್ನದೊಂದು ಲುಂಗಿ ತೊಳೆದುಕೊಳ್ಳಲು ಹೊರಟಿದ್ದ ಋತುರಾಜ. ಹಾಗಂತ ಅವನೇನೂ ದೊಡ್ಡ ಸೈನ್ಯ ಕಟ್ಟಿಕೊಂಡು ದಿಬ್ಬಣ ಹೊರಟಿರಲಿಲ್ಲ. ಕಾಲೇಜಿಗೆ ಚಕ್ಕರ್ ಹೊಡೆದು ಅಂಡಲೆಯುವ ಪಡ್ಡೆಗಳು, ಬೆಳಗಿನ ಬೆಡ್ ಕಾಫಿಗೆ ಬಾರಿಗೇ ಹೋಗುವ ಕುಡುಕರು, ಐದ್ರುಪಾಯಿ ಚಾಕ್ಲೇಟಿಗೇ ಅರ್ಧ ದಿನ ಕುಣಿಯುವ ಚಿಲ್ಟಾರಿಗಳು... ಹೀಗೆ ಸುಲಭವಾಗಿ ಮೋಸ ಹೋಗುವ ಚಿಕ್ಕ ಪಡೆಯೊಂದನ್ನು ಕಟ್ಟಿಕೊಂಡು ಮನೆಮನೆಗೆ ಹೋಗತೊಡಗಿದ. ದೊಡ್ಡದೊಡ್ಡವರನ್ನೂ, ಚುನಾವಣಾ ಚತುರರನ್ನೂ ಸೇರಿಸಿಕೊಂಡರೆ ಉಪ್ಪರಿಗೆಯಲ್ಲಿ ಮುಚ್ಚಿಟ್ಟಿರುವ ಕೊಪ್ಪರಿಗೆ ಬಹುಬೇಗ ಖಾಲಿಯಾಗುತ್ತದೆಂಬುದು ಅವನ ಭಯ. ಅದನ್ನು ಆದಷ್ಟೂ ಕಡಿಮೆ ಖರ್ಚು ಮಾಡಿ ಸಾಕಷ್ಟನ್ನು ತನ್ನಲ್ಲಿಯೇ ಉಳಿಸಿಕೊಳ್ಳುವುದು ಅವನ ಹುನ್ನಾರವಾಗಿತ್ತು. ಹೀಗೆ ಉಳಿಸುವ ಹಣಕ್ಕಾಗಿಯಲ್ಲವೇ ಬೆಂಬಲಿಗರೆಲ್ಲ ನೇತಾರರ ಹಿಂದೆ ಓಡುವುದು?

ಸೋಮಾರಿ ಕಟ್ಟೆಯಲ್ಲಿ ಬೀಡಿ ಸೇದುತ್ತ ರಾಜ್ಯದ ಭವಿಷ್ಯದ ಬಗ್ಗೆ ಚರ್ಚಿಸುವ ಪರಿಣಿತರ ಮಾತು ಕೇಳಿದ ಋತುರಾಜನಿಗೆ ಜಗದೀಶರು ಗೆಲ್ಲುವುದರಲ್ಲಿ ಅನುಮಾನವೇ ಇಲ್ಲ ಅನ್ನಿಸಿತು. ಹಗಲು ರಾತ್ರಿಯನ್ನು ಸೇರುವ ಮಬ್ಬುಗತ್ತಲಿನ ಹೊತ್ತಲ್ಲಿ ಮನೆಮನೆಗೆ ಹೋಗಿ, ತುಂಡು ಟವಲ್ ತೊಟ್ಟ ಯಜಮಾನರನ್ನೂ, ನೈಟಿಗೆ ಕೈ ಒರೆಸುತ್ತ ಬರುವ ಒಡತಿಯರನ್ನೂ ಕರೆದು, ಕೈಗೆ ನೋಟು ಕೊಟ್ಟು ಓಟು ಕೇಳುವಾಗ ಈ ಮೂತಿಗಳಿಗೆ ಇಷ್ಟು ಹಣ ಯಾವ ಕರ್ಮಕ್ಕೆ ಎಂದವನಿಗೆ ಹೊಟ್ಟೆ ಉರಿಯುತ್ತಿತ್ತು. ಎರಡೂ ಪಕ್ಷದವರು ಐನೂರು ಕೊಡ್ತಿದಾರೆ. ನೀನು ಸಾವಿರ ಕೊಡು ಎಂದ ಜಗದೀಶರೇನು ಮನೆಮನೆಗೆ ಬಂದು ಕೇಳುತ್ತಾರೆಯೇ ಋತುರಾಜ ಎಷ್ಟು ಕೊಟ್ಟನೆಂದು? ಇಡೀ ರಾಜ್ಯದ ತಲೆ ಮೇಲೆ ಕೈಯಿಟ್ಟು ಸಂಪಾದಿಸಿದ ಹಡ್ಬೆ ದುಡ್ಡು. ಸಾವಿರ ಜನರ ಎಣ್ಣೆ-ಬೆಣ್ಣೆಗಳಿಗೆ ಖರ್ಚಾಗುವ ಬದಲು ತನಗೊಬ್ಬನಿಗೇ ಉಳಿಯಲಿ!

ಎಷ್ಟೇ ಪ್ರಯತ್ನಿಸಿದರೂ ನುಂಗಣ್ಣ ಮನಸ್ಸಿನ ಮಾತನ್ನು ಮೀರುವುದು ಋತುರಾಜನಿಗೆ ಸಾಧ್ಯವಾಗಲೇ ಇಲ್ಲ. ಆದಷ್ಟೂ ತನ್ನ ಸೈನ್ಯವನ್ನು ಚಿಕ್ಕದಾಗಿಯೇ ಇಟ್ಟುಕೊಂಡ. ಹೆಚ್ಚಿನ ಮನೆಗಳಿಗೆಲ್ಲ ಐನೂರೇ ಕೊಟ್ಟ. ಮುದುಕರಷ್ಟೇ ಇರುವ ಮನೆಗಳಿಗೆ ಅದನ್ನೂ ಕೊಡಲಿಲ್ಲ. ತನ್ನ ಷಡ್ಯಂತ್ರ ಯಾರಿಗೂ ಗೊತ್ತಾಗದಂತೆ ಮೇಲಕ್ಕೆ ದೊಡ್ಡ ಕಣ್ಕಟ್ಟನ್ನೇ ಮಾಡಿದ. ಆಟೋ ಹತ್ತಿ 'ನಿಮ್ಮ ಮತ ಯಾರಿಗೆ? ನಮ್ಮ ಜಗದೀಶಣ್ಣಂಗೆ' ಎಂದು ತಾನೇ ಮೈಕು ಹಿಡಿದು ಊರ ತುಂಬಾ ಬೊಬ್ಬೆ ಹೊಡೆದ.

ಚುನಾವಣೆಯ ದಿನ ಮತಗಟ್ಟೆಯಿಂದ ಇನ್ನೂರು ಮೀಟರ್ ದೂರ ನಿಂತುಕೊಂಡು ಓಟು ಹಾಕಲು ಬಂದವರಿಗೆಲ್ಲ, 'ಎಲ್ಲ ನಮ್ಕಡೆನೇ ಆಯಿತ್. ಈಗ ನೀವೇನ್ ಮಾಡ್ತಿ ಅನ್ನೋದ್ರ ಮೇಲೆ ಎಲ್ಲ ನಿಂತಿತ್' ಎಂದು ಪೂಸಿ ಹೊಡೆದ.

ಕಟ್ಟಕಡೆಯ ಮತದಾರನೂ ಓಟು ಹಾಕಿ ಮತಗಟ್ಟೆ ಬಾಗಿಲು ಮುಚ್ಚಿದ ಬಳಿಕ ಮನೆಗೆ ಬಂದು ಉಪ್ಪರಿಗೆ ಹತ್ತಿ ನೋಡಿದರೆ ಜಗದೀಶರು ಕೊಟ್ಟ ಹಣದಲ್ಲಿ ಅರ್ಧದಷ್ಟು ಬ್ಯಾಗಿನಲ್ಲೇ ಬಾಕಿಯಾಗಿತ್ತು!

* *

ಜಗದೀಶರ ಮನೆಗೆ ಹೋಗಿ ವಿಕ್ಟರಿ ಪಕ್ಕಾ ಅಣ್ಣಾ ಎಂದು ಆಸೆ ಹುಟ್ಟಿಸಿ ಮನೆಗೆ ಮರಳಿದ ಋತುರಾಜನಿಗೆ ಆಘಾತ ಕಾದಿತ್ತು. ತೋಟಕ್ಕೆ ಹೋಗುವ ರಸ್ತೆಗೆ ಅವನು ಕಟ್ಟಿದ್ದ ದಣಪೆಯನ್ನು ಯಾರೋ ಕಿತ್ತೊಗೆದಿದ್ದರು. ನೂರು ಪ್ರಶ್ನೆಗಳು ಉರಿಗೋಪವಾಗಿ ಉಕ್ಕುತ್ತಿದ್ದ ಮುಖದಲ್ಲಿ ಮನೆಯೊಳಗೆ ಕಾಲಿಟ್ಟವನಿಗೆ, 'ಬಂದ್ಯನ ಋತೂ, ಬಾರಾ... ನಾ ಎಷ್ಟ್ ಹೇಳ್ರೂ ಕೇಳ್ದೇ ಆ ಹಲ್ಕಟ್ ನೇಮು ದಣಪೆ ಕಿತ್ ಒಗೆದ್ನ... ಅವ್ನ್ ಕೈಗ್ ರಣ ಬಡಿಯಾ...' ಎಂಬ ಅಮ್ಮ ಚೀರುವಿನ ಚೀರಾಟ ಮತ್ತಷ್ಟು ಹುಚ್ಚು ಕೆದರಿಸಿತು. ನೇಮು! ಪಕ್ಕದ ಮನೆಯ ಮೇಷ್ಟರ ಜಮೀನನ್ನು ಖರೀದಿಸಿರುವವನು!

ಪ್ರಳಯಾಗ್ನಿಯೊಂದು ಲುಂಗಿ ಸುತ್ತಿಕೊಂಡು ಹೋಗುತ್ತಿರುವಂತೆ ನೇಮುವಿನ ಅಂಗಳ ಪ್ರವೇಶಿಸಿದವನೇ 'ಏ ಹಲ್ಕಟ್ ನನ್ಮಗ್ನೇ, ಯಾರಪ್ಪನ್ ಕೇಳಿ ದಣ್ಪೆ ಕಿತ್ತೊಗೆದ್ಯಾ? ಬಾರಾ ಹೊರ್ಗೆ ಲೋಫರ್' ಎಂದು ಕಿರುಚಿದ.